ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಕೆಎಸ್ಆರ್‌ಟಿಸಿ ವಿಚಾರಕ್ಕೆ ಎಲ್ಲಾ ಮೇಲ್ಮನೆಯಲ್ಲಿ ಇದ್ದಾರೆ.

ಅಧ್ಯಕ್ಷರು : ನಾನು ಏನು ಮಾಡಬೇಕು? ಇದು ಪ್ರಶ್ನೋತ್ತರ ವೇಳೆ. ಇಲ್ಲಿ ಮುಖ್ಯಸಚೇತಕರು ಇಲ್ಲ. ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಇಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿ, ಸೋಮವಾರ ತೆಗೆದುಕೊಳ್ಳೋಣ.

ಅಧ್ಯಕ್ಷರು : ಆಯಿತು.

ಬೆಂಗಳೂರು ನಗರದ ಎಪಿಎಂಸಿಯಲ್ಲಿ ವ್ಯವಸ್ಥೆ ಕುರಿತು.

178 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದ ಯಶವಂತಪುರದಲ್ಲಿರುವ ಎಪಿಎಂಸಿ ಯಾರ್ಡ್‌ನಲ್ಲಿ ಇರುವ ಅಂಗಡಿ ಮಳಿಗೆಗಳೆಷ್ಟು;*

ಆ) *ಹೊಸದಾಗಿ ನಿರ್ಮಿಸಲಾಗಿರುವ ಅನೇಕ ಮಳಿಗೆಗಳನ್ನು ಇನ್ನು ಹಂಚಿಕೆದಾರರು ತೆರೆಯದಿರುವ ಅಂಶವು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಅಂಗಡಿಗಳನ್ನು ತೆರೆಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು;*

ಇ) *ಆರ್ ಎಂ ಸಿ ಪ್ರಾಂಗಣದಲ್ಲಿ ಇರುವ ಹಣ್ಣು ತರಕಾರಿ ಮಾರಾಟಗಾರರ ಸಂಖ್ಯೆ ಎಷ್ಟು? ಈ ಮಾರಾಟಗಾರರು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?*

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಬೆಂಗಳೂರು ನಗರದ ಯಶವಂತಪುರ ಎಪಿಎಂಸಿ ಯಾರ್ಡ್‌ನಲ್ಲಿ ಪೇಟೆ ಕಾರ್ಯಕರ್ತರುಗಳನ್ನೊಳಗೊಂಡ ಸಮಿತಿಯ ಮಾಲೀಕತ್ವ ಹೊಂದಿರುವ 669 ಅಂಗಡಿ-ವ-ಗೋದಾಮ ಮತ್ತು 60 ಮಳಿಗೆಗಳು ಈ ರೀತಿ ಒಟ್ಟು 729 ಅಂಗಡಿ ಮಳಿಗೆಗಳು ಇರುತ್ತವೆ.

ಆ) ಹೌದು. ಮಾರುಕಟ್ಟೆ ಪ್ರಾಂಗಣದ ಬಿ.ಡಿ.ಎ. ಬ್ಲಾಕ್‌ನಲ್ಲಿ 93 ಗೋದಾಮುಗಳನ್ನು ಲೀವ್-ಅಂಡ-ಲೈಸನ್ಸ್ ಮೇರೆಗೆ ಮತ್ತು 80 ಗೋದಾಮುಗಳನ್ನು 25:75 ಯೋಜನೆ ಯಡಿಯಲ್ಲಿ ಪೇಟೆ ಕಾರ್ಯಕರ್ತರಿಗೆ ಹಂಚಲಾಗಿದ್ದು, ಸದರಿಯವರು ಈ ಗೋದಾಮುಗಳಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿಲ್ಲವಾದ್ದರಿಂದ ಪೇಟೆ ಕಾರ್ಯಕರ್ತರಿಗೆ ಹಲವಾರು ತಿಳುವಳಿಕೆ ಪತ್ರ ನೀಡಲಾಗಿದೆ. ಮತ್ತು ಇವುಗಳಲ್ಲಿ ವ್ಯಾಪಾರ ವಹಿವಾಟು ಪ್ರಾರಂಭಿಸಲು ಮಾರುಕಟ್ಟೆ ಸಮಿತಿಯು ಕ್ರಮ ಕೈಗೊಳ್ಳುತ್ತಿದೆ.

೫) ದಿನಾಂಕ 5-10-1994ರಲ್ಲಿ ಹಣ್ಣು ಮತ್ತು ತರಕಾರಿಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಬೆಂಗಳೂರಿನಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಇದಕ್ಕೆ ಒಳಪಟ್ಟಂತೆ 337 ಬಾಳೆಕಾಯಿ ಮತ್ತು ಇತರೆ ಹಣ್ಣುಗಳ ಪೇಟೆ ಕಾರ್ಯಕರ್ತರು ಹಾಗೂ 378 ತರಕಾರಿ ವರ್ತಕರು ಮಾರುಕಟ್ಟೆ ಸಮಿತಿಯಿಂದ ಲೈಸನ್ಸ್ ಪಡೆದು ಹಣ್ಣು ತರಕಾರಿಗಳ ನಿಯಂತ್ರಿತ ಸಗಟು ವ್ಯಾಪಾರ ವಹಿವಾಟು ನಡೆಸುತ್ತಿರುವರು. ಈ ಮಾರಾಟಗಾರರು ಹಾಗೂ ಹಣ್ಣು ಮತ್ತು ತರಕಾರಿಗಳ ಮಾರುಕಟ್ಟೆ ಸಮಸ್ಯೆಗಳ ಕುರಿತು ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ನನ್ನ ಎರಡನೆ ಪ್ರಶ್ನೆಗೆ ಹೊಸದಾಗಿ ನಿರ್ಮಿಸಲಾಗಿರುವ ಅನೇಕ ಮಳಿಗೆಗಳನ್ನು ಇನ್ನೂ ಹಂಚಿಕೆದಾರರು ತೆರೆಯದಿರುವ ಅಂಶವು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವುದಕ್ಕೆ ಉತ್ತರದಲ್ಲಿ 'ಹೌದು' ಎಂದು ಹೇಳಿದ್ದಾರೆ. ನಾನು ಕೇಳುವುದೇನೆಂದರೆ, ಈ ಅಂಗಡಿಗಳನ್ನು ಯಾವಾಗ ಹಂಚಲಾಯಿತು? ಇದುವರೆಗೂ ಕೂಡ 173 ಮಳಿಗೆಗಳನ್ನು ಹಂಚಿಕೆದಾರರು ಏಕೆ ಬಂದು ಸ್ವಾಧೀನಕ್ಕೆ ತೆಗೆದುಕೊಂಡು ವ್ಯಾಪಾರ ಮಾಡಲು ಪ್ರಾರಂಭ ಮಾಡಿಲ್ಲ? ಮಾನ್ಯ ಸಚಿವರು ಕಳೆದ ನವೆಂಬರ ತಿಂಗಳಿನಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳ ಜೊತೆಯಲ್ಲಿ ಬಂದು ಅಲ್ಲಿ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದಾಗಲೂ ಕೂಡ ಈ ವಿಚಾರ ತಮ್ಮ ಗಮನಕ್ಕೆ ಬಂದಿತ್ತು. ಸುಮಾರು ವರ್ಷಗಳಾದರೂ ಕೂಡ ಹಂಚಿಕೆದಾರರು ಬಂದು ಮಳಿಗೆ ತೆಗೆದುಕೊಳ್ಳದೆ ಇರುವುದಕ್ಕೆ ಮುಖ್ಯ ಕಾರಣವೇನು? ಯಾವಾಗ ಇದು ಹಂಚಿಕೆಯಾಗಿದೆ?

ಶ್ರೀ ಹೆಚ್. ನಾಗಪ್ಪ : ಮಾನ್ಯ ಅಧ್ಯಕ್ಷರೇ, ಈ ಮಳಿಗೆಗಳು ಬಹಳ ಹಿಂದೆಯೇ ಹಂಚಿಕೆಯಾಗಿವೆ. ಅಲ್ಲಿ ಏನು ಬಿಸಿನೆಸ್ ನಡೆಯುತ್ತದೆ ಅದು ಸ್ವಲ್ಪ ದೂರದಲ್ಲಿ ಇರುವುದರಿಂದ ಅವರು ಬಂದು ತೆಗೆದುಕೊಳ್ಳುತ್ತಿರಲಿಲ್ಲ. ಆದರೆ ಈಗ ಅವರಿಗೆ ನೋಟೀಸ್ ಕೊಟ್ಟಿದ್ದೇವೆ. ಆದಷ್ಟು ಜಾಗ್ರತೆ ಅದನ್ನು ತೆಗೆದುಕೊಂಡು ನಿಮ್ಮ ಬಿಸಿನೆಸ್ ಪ್ರಾರಂಭ ಮಾಡಬೇಕು, ಇಲ್ಲದಿದ್ದರೆ ವಿತ್‌ಡ್ರಾ ಮಾಡಿಕೊಳ್ಳುತ್ತೇವೆಂದು ನೋಟೀಸ್ ಇಶ್ಯೂ ಮಾಡಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಇದು ಏಕೆ ಆಗುತ್ತಿಲ್ಲ ಎಂಬುದಕ್ಕೆ ನನ್ನ ಅನಿಸಿಕೆ ಏನೆಂದರೆ, ಇಲ್ಲಿ ಹಂಚಿಕೆಯಲ್ಲಿ ಆಗಿರುವಂತಹ ಒಂದು ಅವ್ಯವಹಾರ, ಇಲ್ಲಿ ಹಂಚಿಕೆಗೆ ಒಂದು ಮಾನದಂಡವೇ ಇಲ್ಲ. ನನಗೆ ಗೊತ್ತಿರುವ ಪ್ರಕಾರ ಎ.ಪಿ.ಎಂ.ಸಿ.ಯಲ್ಲಿ ಒಬ್ಬರಿಗೆ ಒಂದು ಅಂಗಡಿಗಿಂತ ಜಾಸ್ತಿ ಕೊಡಬಾರದು. ಆದರೆ ನನ್ನ ಹತ್ತಿರ ಮಾಹಿತಿ ಇದೆ. ಉದಾಹರಣೆಗೆ, ಎಚ್ ಎ ಎಲ್ ಟಿ ಎಂದು. ಒಬ್ಬರೇ ವ್ಯಕ್ತಿ ಹಾಜಿ ಅಬ್ದುಲ್ ಲತೀಫ್ ತಯಾಬ್ ಎನ್ನುವವರು 26 ಅಂಗಡಿಗಳನ್ನು ತೆಗೆದುಕೊಂಡಿದ್ದಾರೆ. ಇನ್ನೊಂದು, ಹಾಜಿ ಟ್ರೇಡರ್ಸ್ 6 ಅಂಗಡಿ, ಭಾಗ್ಯಲಕ್ಷ್ಮೀ ಟ್ರೇಡರ್ಸ್ 6 ಅಂಗಡಿಗಳನ್ನು ತೆಗೆದುಕೊಂಡಿದ್ದಾರೆ. ನಿಮ್ಮಲ್ಲಿ ಈ ರೀತಿ ಯಾರೋ ಬಂದರು, ನಮಗೆ ಯಾರೋ ಶಿಫಾರಸ್ಸು ಮಾಡಿದರು, ಅವರಿಗೆ ಪ್ರಭಾವ ಇದೆ ಎಂದು ಹಂಚಿಕೆ ಮಾಡಿದರೆ ಅವರು ಇಲ್ಲಿ ಬಂದು ತೆಗೆಯುವುದಿಲ್ಲ, ಅವರು ಯಾವುದೋ ಒಂದು ಸ್ಪೆಕ್ಯುಲೇಷನ್‌ಗೋಸ್ಕರ ಕಾಯುತ್ತಿದ್ದಾರೆ. ನಾನು ಈ ಸಂದರ್ಭದಲ್ಲಿ ಅಧ್ಯಕ್ಷರ ಮೂಲಕ ಸನ್ಮಾನ್ಯ ಸಚಿವರನ್ನು ಕೇಳಿಕೊಳ್ಳುವಂಥದ್ದು ಏನೆಂದರೆ, ಹೊಸದಾಗಿ ಪ್ರಾರಂಭವಾಗಿರುವಂತಹ ಗಾಂಧೀ ಬ್ಲಾಕ್‌ನಲ್ಲಿ ಸುಮಾರು 44 ಅಂಗಡಿಗಳಿವೆ. ಅವನ್ನು ನೀವು ಈ ರೀತಿ ಬಲಾಢ್ಯರು ಇದ್ದಾರೆ ಎಂದು

ಹಂಚಿಬಿಟ್ಟಿರುವುದರಿಂದ ಅಲ್ಲಿಗೆ ಬೇರೆ ಯಾರೂ ಕೂಡ ಬರುತ್ತಿಲ್ಲ, ಮತ್ತು ವಿಶೇಷವಾಗಿ ಆರ್.ಎಂ.ಸಿ.ಯಾರ್ಡ್‌ನಲ್ಲಿ ಮತ್ತು ಎ.ಪಿ.ಎಂ.ಸಿ ದಿವಸಕ್ಕೆ ನಾಲ್ಕು ಲಕ್ಷ ರೂಪಾಯಿ ವಹಿವಾಟು ಮಾಡುವವರೂ ಕೂಡ ಕುಡಿಯುವ ನೀರಿಲ್ಲದೆ, ಶೌಚಾಲಯ ಇಲ್ಲದೆ ಅಲ್ಲಿರುವಂಥ ಗೋಡೆಗಳನ್ನು ಮರಗಳನ್ನು ಇವೊತ್ತು ಆಶ್ರಯಿಸಬೇಕಾದ ಪರಿಸ್ಥಿತಿ ಇದೆ. ಒಟ್ಟಾರೆ ಎ.ಪಿ.ಎಂ.ಸಿಯದು ಏನು ವ್ಯವಹಾರ ನಡೆಯುತ್ತಿದೆ ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳಬೇಕೆಂದಿದ್ದೀರಿ ಅದರ ಬಗ್ಗೆ ಉತ್ತರ ಕೊಡಿ.

ಶ್ರೀ ಎಚ್.ನಾಗಪ್ಪ : ಸನ್ಮಾನ್ಯ ಅಧ್ಯಕ್ಷರೆ, ಒಬ್ಬ ವ್ಯಕ್ತಿಗೆ 18-20 ಅಂಗಡಿಗಳನ್ನು ಕೊಟ್ಟಿದ್ದಾರೆ ಎಂದು ಹೇಳುತ್ತೀರಿ, ಅದರ ಬಗ್ಗೆ ತಾವು ಮಾಹಿತಿಯನ್ನು ಕಳುಹಿಸಿಕೊಟ್ಟರೆ ನಾನು ಪರಿಶೀಲನೆ ಮಾಡುತ್ತೇನೆ. ಹಿಂದೆ ಆಗಿರತಕ್ಕಂಥ ವಿಷಯಗಳು ನನಗೂ ಕೂಡ ಗೊತ್ತಿಲ್ಲ ಅದನ್ನು ತಾವು ಕಳುಹಿಸಿಕೊಟ್ಟರೆ ಪರಿಶೀಲನೆ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ತಮಗೆ ತಿಳಿಸುತ್ತಾ, ಕೆಲವು ಸೌಕರ್ಯಗಳಿಲ್ಲ ಎಂದು ತಿಳಿಸಿದ್ದೀರಿ ಅದನ್ನು ಆದಷ್ಟು ಜಾಗ್ರತೆ ಮಾಡಿಸಿಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಸುರೇಶಕುಮಾರ್ : ಮಾನ್ಯ ಅಧ್ಯಕ್ಷರೆ, ಈ ಎ.ಪಿ.ಎಂ.ಸಿ ಒಳಗಡೆ ಬಹಳಷ್ಟು ಸೆಕ್ಯುರಿಟಿಯ ಅಭಾವ ಇದೆ. ರೆಗ್ಯುಲರ್‌ಆಗಿ ಅಲ್ಲಿ ದರೋಡೆ ನಡೆಯುತ್ತಾ ಇದೆ, ಅಲ್ಲಿ ಬೆಳಕಿನ ಅಭಾವದಿಂದ ದರೋಡೆಗಳು ನಡೆಯುವುದು ಮಾಮೂಲಾಗಿದೆ. ಜೊತೆಗೆ ಯಾರ್ಯಾರು ರೈಸ್ ಮರ್ಚೆಂಟ್ಸ್ ಅಲ್ಲಿನ ಆರ್ಗ್ನೈಸ್ಡ್ ಗೂಂಡಾಗಳಿಗೆ, ಮಾಫಿಯಾಗಳಿಗೆ ದುಡ್ಡು ಕೊಡುವುದಿಲ್ಲ ಅವರ ಮೇಲೆ ಸುಮ್ಮಸುಮ್ಮನೆ ರೈಡ್‌ಮಾಡಿಸುವ ವಿಚಾರ ತಮ್ಮ ಗಮನಕ್ಕೆ ಬಂದಿರಬಹುದು. ಇದರ ಬಗ್ಗೆ ಸಿ.ಓ.ಡಿ ತನಿಖೆ ನಡೆದು ವರದಿಯನ್ನೂ ಮಾನ್ಯಮಂತ್ರಿಗಳಿಗೆ ಸಲ್ಲಿಸಿದ್ದಾರೆ. ಇದರ ಬಗ್ಗೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಹೆಚ್. ನಾಗಪ್ಪ : ಸಿ.ಓ.ಡಿ.ಯಿಂದ ವಿಚಾರಣೆಯಾಗಿರುವ ವರದಿ ಪ್ರತಿ ನಮಗೆ ಇನ್ನೂ ಬಂದಿಲ್ಲ. ಕೆಲವು ಕಡೆ ಕಳ್ಳತನವಾಗಿರತಕ್ಕಂಥದ್ದು ನಮ್ಮ ಗಮನಕ್ಕೆ ಬಂದಿದೆ, ಆ ರೀತಿ ಆಗದ ಹಾಗೆ ಅದಕ್ಕೆ ಸೆಕ್ಯುರಿಟಿಯನ್ನು ಒದಗಿಸಲಾಗುವುದು.

ಅಧ್ಯಕ್ಷರು : ರಾಮಕೃಷ್ಣರವರೆ, ಮಂತ್ರಿಗಳು ಆ ಸದನದಲ್ಲಿರುವುದರಿಂದ ತಮ್ಮ ಪ್ರಶ್ನೆಯನ್ನೂ ಕೂಡ ತಥೈಹಿಡಿಯಲಾಗಿದೆ.

ಮುಧೋಳ ತಾಲ್ಲೂಕಿನ ಸಾಗುವಳಿ ಜಮೀನು.

168 - ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಧೋಳ ತಾಲ್ಲೂಕಿನ ರೋಗಿ, ಗುಲಗಾಲ ಜಂಬಗಿ ಮತ್ತು ಮುಳಲಿ ಗ್ರಾಮಗಳಲ್ಲಿ ಸಾಗುವಳಿ ಜಮೀನು ಸವಳು-ಜವಳು ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಎಷ್ಟು ಎಕರೆ ಜಮೀನು ಸವಳು-ಜವಳು ಆಗಿದೆ ?

ಇ) ಜಮೀನು ಸವಳು-ಜವಳು ಆಗುವುದನ್ನು ತಡೆಯಲು ಸರ್ಕಾರವು ಕೈಗೊಂಡ ಕ್ರಮವೇನು ?